
# ಕೇಳು ಜನಮೇಜಯ

ಈಗ ಓದಲು ಪುಸ್ತಕಗಳನ್ನೇ ಅವಲಂಬಿಸಬೇಕಿಲ್ಲ. ಕಣ್ಣುಮುಚ್ಚಿ ಮಲಗಿ ಕತೆಯನ್ನೋ, ಕವಿತೆಯನ್ನೋ ಆನ್‌ಲೈನ್‌ನಲ್ಲಿ ಕೇಳಬಹುದು. ಈಗಾಗಲೇ ಹತ್ತಾರು ಧ್ವನಿಗಳ ಕೇಳು ಪುಸ್ತಕಗಳು ಕಿವಿಯ ಮೇಲೆ ಬೀಳಲು ಸಾಲುಗಟ್ಟಿವೆ. ಕೇಳು ಪುಸ್ತಕದ ಮುದ್ರಿತ ಧ್ವನಿಯೊಂದು ಅರ್ಥವನ್ನು, ಧ್ವನಿತರಂಗಗಳನ್ನು, ಭಾಷೆಯ ಲಯ–ಛಂದಸ್ಸನ್ನು, ಕತೆಯನ್ನು ಕೇಳುಗನಿಗೆ ದಾಟಿಸುತ್ತದೆ. ಈ ಧ್ವನಿಗೆ ಕಣ್ಣಿನಿಂದ ಆಗುವ ಓದಿನ ಪರಿಣಾಮವನ್ನು ಮಾಡಲು ಸಾಧ್ಯವಾಗದು. ಅದು ನಾವು ಎಷ್ಟು ಬಾರಿ ಕೇಳಿದರೂ ಹೆಚ್ಚುಕಡಿಮೆಯಾಗದ ಒಂದೇ ಧ್ವನಿಯಾಗಿರುತ್ತದೆ. ಉತ್ತಮ ಕವಿತೆ ಮತ್ತು ಕತೆ ಮೌನವಾಗಿ ಹೊಮ್ಮಿಸುವ ಅನುರಣ ಅದಕ್ಕಿಲ್ಲ. ಇರುವುದು ಚಪ್ಪಟೆಯಾದ ಒಂದೇ ಆಕಾರ. ಆದ್ದರಿಂದಲೇ ನಾವೇ ನಾವಾಗಿ ಓದಿದಾಗ ಹೊರಡುವ ಅರ್ಥದ ಪದರುಗಳನ್ನು, ವಿಸ್ತಾರಗೊಳ್ಳುವ ಕಲ್ಪನೆಯನ್ನು ದನಿಯೊಂದರಲ್ಲಿ ಬಂದಿಯಾಗಿರುವ ಬರಹ ಪೂರ್ತಿಯಾಗಿ ಅಭಿವ್ಯಕ್ತಿಸುವುದು ಬಹುಶಃ ಅಸಾಧ್ಯ.




ಇದಕ್ಕೆ ಕಾರಣಗಳಿವೆ. ಓದು ಎನ್ನುವುದು ಯಾವತ್ತಿಗೂ ವೈಯಕ್ತಿಕವಾದದ್ದು ಮತ್ತು ಏಕಾಂತದ್ದು. ಧ್ವನಿಯೊಂದರ ಹಾಜರಿ ಓದಿನ ಅನೇಕ ಸಾಧ್ಯತೆಗಳನ್ನು ತಡೆಯುತ್ತದೆ. ಅದು ಮುಖ್ಯವಾಗಿ ನಮ್ಮಲ್ಲಿ ಕ್ರಿಯಾಶೀಲ ಬರಹವೊಂದು ಸೃಷ್ಟಿಸುವ ಜೀವಂತ ಜಗತ್ತು ರೂಪುಗೊಳ್ಳಲು ಬಿಡುವುದಿಲ್ಲ. ಮತ್ತು ಓದುವ ಧ್ವನಿಯನ್ನು ಹಿಂಬಾಲಿಸಲೇ ಬೇಕಾದ ಅನಿವಾರ್ಯತೆ ಸಾಹಿತ್ಯದ ಹಲವು ಸೂಕ್ಷ್ಮಗಳನ್ನು ಹಾಳುಮಾಡಬಹುದು. ಕವಿತೆಯಾಗಲೀ, ಕತೆಯಾಗಲೀ ಮಾಹಿತಿ, ತತ್ವ, ಸಂಶೋಧನೆಯಲ್ಲ; ಅದು ಕೇವಲ ಅರ್ಥವತ್ತಾದ ಮಾತುಗಳ ಸಮೂಹವೂ ಅಲ್ಲವಾದ್ದರಿಂದ ಧ್ವನಿಯ ಏರಿಳಿತದಿಂದ, ನಾಟಕೀಯತೆಯಿಂದ ಕೇಳುಗನನ್ನು ಮುಟ್ಟಲಾಗುವುದಿಲ್ಲ. ಯಾವುದೇ ಓದುಗನಲ್ಲಿ ಸಾಹಿತ್ಯಕೃತಿ ಅರಳುವುದು, ಬೆಳೆಯುವುದು ಸಮಾನಾಂತರ ನೆಲೆಯಲ್ಲಿ ಅದಕ್ಕೆ ಮುಖಾಮುಖಿಯಾದಾಗ ಮಾತ್ರ.

ಕೇಳು ಪಠ್ಯಗಳು ಇಂದಿನ ಅಗತ್ಯ ಕೂಡ. ಅವುಗಳಿಂದ ದೂರದ ಊರಿಗೆ ಪ್ರಯಾಣಿಸುವವರಿಗೆ, ಕಣ್ಣಿಲ್ಲದವರಿಗೆ ಕೂತಲ್ಲೇ ಹಲವು ಸಾಹಿತ್ಯಕೃತಿಗಳನ್ನು ಸನಿಹದಿಂದ ತಿಳಿದುಕೊಳ್ಳಲು ಅವಕಾಶವಾಗುತ್ತದೆ. ಹಿಂದಿನಿಂದಲೂ ಗಮಕಿಗಳು ನಮ್ಮ ಮಹಾಕಾವ್ಯಗಳನ್ನು ವಾಚಿಸುತ್ತ ಬಂದಿದ್ದಾರೆ. ಮತ್ತು ನಮ್ಮಲ್ಲಿ ವಾಚನದ ದೊಡ್ಡ ಪರಂಪರೆಯೇ ಇದೆ. ನಮ್ಮ ಮಹಾಕಾವ್ಯಗಳು ಕೇಳು ಮತ್ತು ಓದು ಪಠ್ಯಗಳಾಗಿ ಇದುವರೆಗೆ ಉಳಿದುಕೊಂಡು ಬಂದಿವೆ. ಆದರೆ, ಗಮಕಕ್ಕೂ ಈಗಿನ ಕೇಳು ಪಠ್ಯಕ್ಕೂ ವ್ಯತ್ಯಾಸವಿದೆ. ಆಧುನಿಕ ಸಾಹಿತ್ಯದಲ್ಲಿ ಅನೇಕ ಪಠ್ಯಗಳನ್ನು ಎಷ್ಟೇ ಆಕರ್ಷಕವಾಗಿ ಕೇಳುವಂತೆ ಓದಿದರೂ ಅವುಗಳ ಸೂಕ್ಷ್ಮತೆ, ಪಾವಿತ್ರ್ಯ ಮುಕ್ಕಾಗುವ ಅಪಾಯವಿರುತ್ತದೆ.

ಕಡೆಗೂ ಓದು ಎನ್ನುವುದು ಹಲವು ವಿಷಯಗಳಿಗೆ ಸಂಬಂಧಿಸಿದ್ದು. ನಾವಿಂದು ದುಡಿಮೆ, ರೋಗ, ಹಣಕಾಸು, ರಾಜಕಾರಣ, ಅಭಿವೃದ್ಧಿ, ದೇಶ, ಧರ್ಮ ಮತ್ತು ಸಿದ್ಧಾಂತಗಳನ್ನು ಒಟ್ಟಿಗೇ ಓದಿ ವರ್ತಮಾನದ ಸವಾಲುಗಳಿಗೆ ಎದುರಾಗಿ ಬದುಕಬೇಕಾದ ಒತ್ತಡದಲ್ಲಿದ್ದೇವೆ. ಈ ಸಂಗತಿಗಳ ಓದು ಸ್ಪಷ್ಟ ಮತ್ತು ನಿರ್ದಿಷ್ಟ. ಆದರೆ, ಶ್ರೇಷ್ಠ ಲೇಖಕರು ಸೃಷ್ಟಿಸಿದ್ದರಲ್ಲಿ ವ್ಯಕ್ತಕ್ಕಿಂತ ಅವ್ಯಕ್ತವೇ ದೊಡ್ಡದಾಗಿರುವುದರಿಂದ ರೆಕಾರ್ಡ್ ಆದ ಧ್ವನಿಯೊಂದು ಅಂತಹ ಬರಹದ ಹಲವು ಧ್ವನಿಗಳನ್ನು ಧ್ವನಿಪೂರ್ಣವಾಗಿ ಧ್ವನಿಸಬಹುದೆ?

**ಸಂದೀಪ ನಾಯಕ**